# ರಂಗಿ ವಿವಾಹೇತರ ಲೈಂಗಿಕತೆ

**ಶ್ವೇತ ಜೆ.**
ಸಂಶೋಧನಾ ವಿದ್ಯಾರ್ಥಿ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ,
ಹಂಪಿ–583276.

ನವೋದಯ ಸಂದರ್ಭದಲ್ಲಿ ಸಣ್ಣಕತೆಯನ್ನು ಒಂದು ಸಾಹಿತ್ಯ ಪ್ರಕಾರವಾಗಿ ಬೆಳೆಸಿದವರು ಮಾಸ್ತಿ. ಹಾಗಾಗಿ ಅವರನ್ನು ಕನ್ನಡ ಸಾಹಿತ್ಯದಲ್ಲಿ 'ಸಣ್ಣಕತೆಗಳ ಜನಕ' ಎಂದು ಕರೆಯಲಾಗುತ್ತದೆ. ಸುಮಾರು ನೂರಕ್ಕು ಹೆಚ್ಚಿನ ಕತೆಗಳನ್ನು ಮಾಸ್ತಿ ಬರೆದಿದ್ದಾರೆ. ರಂಗಣ್ಣನ ಮದುವೆಯಿಂದ ಆರಂಭಗೊಂಡು, ರಂಗಣ್ಣನ ಕನಸಿನ ದಿನಗಳು, ಉಗ್ರಪ್ಪನ ಉಗಾದಿ, ಜೋಗ್ಯೋರ ಅಂಜಪ್ಪನ ಕೋಳಿ ಕತೆ, ಮೊಸರಿನ ಮಂಗಮ್ಮ, ಮಸುಮತ್ತಿ ಹೀಗೆ ಇವರ ಯಶಸ್ವಿ ಕತೆಗಳ ಪಟ್ಟಿ ಮುಂದುವರೆಯುತ್ತದೆ. ಮಾಸ್ತಿ ಅವರ ಕಥನದ ಜೀವಾಳ ಇರುವುದೇ ಅವರ ಬರವಣಿಗೆ ಶೈಲಿ ಹಾಗೂ ನಿರೂಪಣಾ ಕ್ರಮದಲ್ಲಿ. ಇವರ ಕಥನ ಭಾಷೆ ಅತ್ಯಂತ ಸರಳ. ಅವರ ಕತೆಗಳು ನೇರ ಹಾಗೂ ಸರಳ ನಿರೂಪಣೆಯೊಂದಿಗೆ ಓದುಗರ ಮುಂದೆ ತೆರೆದುಕೊಳ್ಳುತ್ತವೆ. ಹಾಗಾಗಿ ಭಾಷೆ ಎಲ್ಲಿಯೂ ಬಿಗಿ ಅನಿಸುವುದಿಲ್ಲ. ಗಂಭೀರ ವಿಚಾರಗಳನ್ನು ಸರಳವಾಗಿ ಹೇಳುವುದು ಮಾಸ್ತಿ ಅವರ ಕಥೆಯ ಮುಖ್ಯ ಲಕ್ಷಣವಾಗಿದೆ.

ಈ ಕತೆಯಲ್ಲಿ ಬರುವ ಪ್ರಮುಖ ಪಾತ್ರಗಳು ನಿರೂಪಕ, ವೆಂಕಟಿಗ, ರಂಗಿ, ಅವನ ತಾಯಿ, ಅತ್ತೆ ಹಾಗೂ ಸಾವುಕಾರ ರೆಡ್ಡಿ. ಇದರ ಜೊತೆಗೆ ಕತೆಯ ಒಳಗಿನ ಪರಿಸರವು ಒಂದು ಪಾತ್ರವೆ ಆಗಿದೆ. ಈ ಕತೆಯ ಶೀರ್ಷಿಕೆ 'ವೆಂಕಟಿಗನಹೆಂಡತಿ' ಅಂತಿದ್ದರೂ ಇಲ್ಲಿ ಕತೆಗಾರ ಮುಖ್ಯವಾಗಿ ಹೇಳಲು ಹೊರಟಿರುವುದು ಕಟ್ಟಿಗೆ ಮಾರಿ ಜೀವನ ನಡೆಸುತ್ತಿದ್ದ ವೆಂಕಟಿಗ ಎಂಬುವವನ ಕತೆಯನ್ನು. ಆ ಮೂಲಕ ಅಂಥವರು ಬದುಕಬೇಕಾದ ರೀತಿಯನ್ನು. ಕತೆಯ ಶಿರ್ಷಿಕೆಯನ್ನು ಲೇಖಕರು ವೆಂಕಟಿಗನ ಹೆಂಡತಿ ಎಂದು ಇಟ್ಟಿದ್ದರೂ ಕತೆಯಲ್ಲಿ ಮುಖ್ಯವಾಗಿ ಚರ್ಚೆಗೆ ಗುರಿಯಾಗುವುದು ವೆಂಕಟಿಗನ ಹೆಂಡತಿಯಾದ ರಂಗಿಯ ವಿವೇಹೇತರ ಲೈಂಗಿಕ ಸಂಬಂಧ. ಲೇಖಕರು ರಂಗಿಯನ್ನು ಅವಳ ಹೆಸರಿನಿಂದಲೆ ಗುರುತಿಸಿ ರಂಗಿ ಎಂಬ ಹೆಸರನ್ನೆ ಇಡುವ ಬದಲು ಕತೆಗೆ ವೆಂಕಟಿಗನ ಹೆಂಡತಿ ಎಂಬ ಹೆಸರನ್ನು ಇಟ್ಟಿದ್ದಾರೆ. ಅದರ ಉದ್ದೇಶವೇ ಅವಳು ಇವನ ಹೆಂಡತಿ ಎಂದು ಹೇಳುವುದು. ಒಂದು ಹೆಣ್ಣು ಮದುವೆಯಾದ ನಂತರ ಮಿಕ್ಕಪುರುಷರು ಅವಳಿಗೆ ಪರಪುರುಷರು. ಅವಳು ತನ್ನ ಗಂಡನನ್ನು ಅಲ್ಲದೆ ಅನ್ಯರನ್ನು ಲೈಂಗಿಕವಾಗಿ ಕೂಡುವಂತಿಲ್ಲ. ಇದು ನಮ್ಮ ಸಮಾಜದಲ್ಲಿನ ದಾಂಪತ್ಯ ಲೈಂಗಿಕ ನೀತಿ. ಆದರೆ ಅವಳು ಸಾಹುಕಾರನಿಗೆ ಮರುಳಾಗಿ ಅವನೊಂದಿಗೆ ಸಂಬಂಧ ಹೊಂದುತ್ತಾಳೆ. ಈ ರೀತಿ ವಿವಾಹೇತರ ಲೈಂಗಿಕ ಸಂಬಂಧವನ್ನು ಒಂದು ಹೆಣ್ಣು ಹೊಂದಬಹುದೇ? ವಿವಾಹಿತ ಮಹಿಳೆಯನ್ನು ಮತ್ತೊಬ್ಬ ವಿವಾಹಿತ ಪುರುಷ ಬಯಸಬಹುದೇ? ಹಾಗೊಂದು ವೇಳೆ 'ಪರಪುರುಷ'ನ ಸಂಬಂಧ ಮಾಡಿದವಳನ್ನು, ಅವನಿಂದಲೆ ಮಗುವೊಂದನ್ನು ಪಡೆದವಳನ್ನು ಆಕೆಯ ಗಂಡ ಹೇಗೆ ನಡೆಸಿಕೊಳ್ಳಬೇಕು? ಇಂತಹ ಪ್ರಶ್ನೆಗಳನ್ನು ಕತೆ ಚರ್ಚಿಸುತ್ತದೆ.

ವೆಂಕಟಿಗನಿಗೆ ತನ್ನ ಅತ್ತೆಯ ಮಗಳು ರಂಗಿಯ ಜೊತೆಗೆ ಮದುವೆಯಾಗಿರುತ್ತದೆ. ಇವರಿಬ್ಬರೂ ಬಾಲ್ಯದಲ್ಲಿ ಜೊತೆಗೆ ಆಡಿ ಬೆಳೆದವರು. ದಿನ ಸೌದೆ ತಂದು ವ್ಯಾಪಾರಕ್ಕೆ ಜೊತೆಗೆ ಹೋಗುತ್ತಿರುತ್ತಾರೆ. ರಂಗಿ ಅತ್ಯಂತ ರೂಪವತಿ. ಇವಳು ನಡೆಯುತ್ತಿದ್ದರೆ ಗುಡಿಯಲ್ಲಿನ ಕಲ್ಲಿನ ಮೂರ್ತಿಯೆ ಹೊರಗೆ ನಡೆದು ಬಂತೇನೊ ಎನ್ನುವಂತಹ ಸೌಂದರ್ಯ. ವ್ಯಾಪಾರಕ್ಕೆ ಹೋಗುತ್ತಿದ್ದಾಗ 'ನಾವು ಕದಿಯೋಣ' ಎನ್ನುವ ವೆಂಕಟಿಗನ ಮಾತಿಗೆ "ಜೋಕೆ ದೇವರು ಶಿಕ್ಷೆಮಾಡುತ್ತಾನೆ"[1] ಎನ್ನುವ ರಂಗಿ ಯಾವುದೇ ಮೋಸ, ವಂಚನೆಯನ್ನು ಮಾಡದ ಹುಡುಗಿ. ಯಾರಾದರೂ ಹುಡುಗರು ಸಲಿಗೆ ಮಾಡಿದರೆ "ಏನೊ ಅದು, ನನ್ನ ಸೂಳೆನ್ನ ಮಾಡಿದ್ಯಾ."[2] ಇಂತಹ ಕಡೆ ತನ್ನ 'ಶೀಲ'ದ ಬಗ್ಗೆ ಎಚ್ಚರಿಕೆ ಇರುವ, ತನ್ನನ್ನು ರಕ್ಷಿಸಿಕೊಳ್ಳಲು ಜೋರು ಮಾಡುವ ದಿಟ್ಟ ಹುಡುಗಿ ರಂಗಿ. ಇಂತಹ ಹೆಣ್ಣು ಸಾವುಕಾರನ ಐಶ್ವರ್ಯಕ್ಕೆ ಮರುಳಾಗಿ ಗಂಡನನ್ನು ತೊರೆಯುವುದು ಆಶ್ಚರ್ಯ ಅನಿಸುತ್ತದೆ. ಇದಕ್ಕೆ ಸಮಾಜಾಯಿಷಿ ಎನ್ನುವಂತೆ "ಅಧಿಕಾರ, ಪದವಿ ನೋಡಿ ಗಂಡಸರೆ ವ್ಯಾಮೋಹಕ್ಕೆ ಒಳಗಾಗುವಾಗ ಅದೇ ಪದವಿ ಇರೋನು ಕರೆದರೆ ಹೆಣ್ಣು ತಡೆದೀತೆ? ಏನೂ ಅರಿಯದ ಹುಡುಗಿ ಒಪ್ಪಿಕೊಂಡಿತು"[3] ಎನ್ನುವ ವೆಂಕಟಿಗನ ಮಾತುಗಳನ್ನು ನೋಡಬಹುದು.

ಎಂತಹ ವಿಶಾಲ ಮನೋಭಾವ ಈತನದು! ಇವತ್ತು ನಮ್ಮ ನಡುವೆ ವೆಂಕಟಿಗನಂತಹ ವ್ಯಕ್ತಿತ್ವಗಳು ಕಾಣಸಿಗುವುದೇ ಇಲ್ಲ. ಸಿಕ್ಕರೂ ಹೆಂಡತಿ ತಿಳಿಯದೆ ದಾರಿತಪ್ಪಿದಾಗ ಅವಳಿಗೆ ಬುದ್ದಿ ಹೇಳಿ ಪುನಃ ಆಕೆಯ ಜೊತೆಗೆ ಸಂಸಾರ ನಡೆಸುವ ವೆಂಕಟಿಗನಂತಹ ಗಂಡ ಸಿಗಬೇಕಲ್ಲ! ಎಲ್ಲಾ ತಿಳಿದು ಅವಿವೇಕಿ ಯೆಂಕ್ಟರಂತೆ ನಡೆದುಕೊಳ್ಳುವ ಗಂಡುಗಳಿಗೆ ಓದು ಬರಹ ತಿಳಿಯದ ಈ ವೆಂಕಟಿಗ ಒಂದು ಆದರ್ಶವಾಗಿ ಕಂಡುಬರುತ್ತಾನೆ. ಒಂದು ಸಾಹಿತ್ಯ ಕೃತಿ ಸಮಾಜದಲ್ಲಿ ಇರುವುದನ್ನು ಬರೆಯುವುದಕ್ಕಿಂತ, ಸಮಾಜದಲ್ಲಿ ಇರಬೇಕಾದುದ್ದನ್ನು ಬರೆಯಬೇಕು. ನುಡಿದಂತೆ ನಡೆ ಇರಬೇಕು. ಈ ಮಾತುಗಳು ವೆಂಕಟಿಗನ ಬಗ್ಗೆ ಮಾತನಾಡುವಾಗ ಈ ಸಂದರ್ಭಕ್ಕೆ ಹೆಚ್ಚು ಸೂಕ್ತವಾಗಿದೆ ಎನ್ನುವುದು ನನ್ನ ಭಾವನೆ.

ರಂಗಿ ಬೇಕಂತಲೆ ಅಥವಾ ತಿಳಿದು ತಿಳಿದು ಸಾವುಕಾರನ ಸಂಗ ಮಾಡಲಿಲ್ಲ. ಅದು ತಿಳಿಯದೆ ಮಾಡಿದ ಕೆಲಸ. ಸಾವುಕಾರನ ಜೊತೆಗೆ ಹೋಗುವುದು ಮರಳಿ ಬರುವುದು ಎರಡು ರಂಗಿಯ ಆಯ್ಕೆಯೇ. ಕಥೆಗಾರನು ನೇರವಾಗಿ ಎಲ್ಲು ಸರಿ ತಪ್ಪುಗಳ ನಿರ್ಣಯಕ್ಕೆ ಬರುವುದಿಲ್ಲ. (ಆದರೆ ಕತೆಯನ್ನು ಇಡಿಯಾಗಿ ಬರೆಸಿರುವುದು ಲೇಖಕರೆ ತಾನೆ) ಎರಡು ಕುಟುಂಬಗಳು, ಎರಡು ಸಂಸಾರಗಳು ಒಡೆದು ಹೋಗಬಾರದು ಎಂಬ ಕಾಳಜಿ ಇಲ್ಲಿದೆ.

ಸಾವುಕಾರನು ಮದುವೆಯಾದ ಹೆಣ್ಣನ್ನು ಯಾಮಾರಿಸಿ ಕರೆತಂದದ್ದಕ್ಕೆ ಅವನ ಹಿರಿಯ ಹೆಂಡತಿಗೆ ಸಿಟ್ಟು, ವಿಷಾದವಿದೆ. ಗಂಡನ ವರ್ತನೆ ಮಿತಿ ಮೀರಿದರು ಅದನ್ನು ಹೆಂಡತಿಯಾದವಳು ಏನು ಮಾಡಲಾರದೆ ಸಹಿಸಿಕೊಳ್ಳುತ್ತಾಳೆ. ಬಡವನ ಗುಡಿಸಲಿನ ಹೆಣ್ಣಿಗಿರುವಷ್ಟು ಸ್ವಾತಂತ್ರ, ಆಯ್ಕೆ ಉಳ್ಳವರ ಹೆಣ್ಣುಗಳಿಗೆ ಇಲ್ಲ! ನಮ್ಮಲ್ಲಿ ಸ್ತ್ರೀ ಸ್ವಾತಂತ್ರ್ಯ, ಸ್ತ್ರೀ ಆಯ್ಕೆ ಎಂಬವು ಹಾಗೆ ಏಕರೂಪಿ ಅಲ್ಲ. ಲಿಂಗಾತೀತ ನೈತಿಕತೆ, ವರ್ಗಾತೀತ ನೈತಿಕತೆ ಎಂಬುದು ನಮ್ಮಲ್ಲಿ ಇಲ್ಲ ಕೂಡ.

ವೆಂಕಟಿಗನಿಗೆ ತನ್ನ ಮನೆತನ, ಮರ್ಯಾದೆ ಕುರಿತ ಅರಿವಿದೆ. ರಂಗಿ ಬಿಟ್ಟು ಹೋದದ್ದಕ್ಕೆ ಅವನು ಏನೂ ಮಾಡುವ ಸ್ಥಿತಿಯಲ್ಲು ಇರಲಿಲ್ಲ. ರಂಗಿ ಮನೆ ಬಿಟ್ಟು ಹೋಗಿದ್ದಕ್ಕೆ ಅವನ ತಾಯಿಯು ಕೂಗಾಡುತ್ತಾಳೆ. ಆಗ ಇವನೆ "ಮನೆಯ ಸೊಸೆಯ ಮಾತು, ಕೂಗಿದಷ್ಟು ನಮ್ಮ ಮರ್ಯಾದೆಯೇ ಕೆಡುತ್ತದೆ. ಬಾಳಿದರೆ ಚೆನ್ನಾಗಿತ್ತು, ಬಾಳಲಿಲ್ಲ. ಸುಮ್ಮನಿರೋಣ"[4] ಎನ್ನುತ್ತಾನೆ. ತಾಯಿ ಹಾಗು ಅತ್ತೆ ಬೇರೆಯ ಮದುವೆ ಆಗುವಂತೆ ಹೇಳಿದಾಗ ಯಾರ ಮಾತಿಗು ಕಿವಿಗೊಡದೆ ತನ್ನ ಸ್ವಭಾವಕ್ಕೆ ತಕ್ಕಂತೆ ನಡೆದುಕೊಳ್ಳುತ್ತಾನೆ. ಇಲ್ಲಿ ವೆಂಕಟಿಗನಿಗೆ ಬೇಸರವಿದೆ, ಕೋಪವಲ್ಲ. "ಈ ಜನ್ಮಕ್ಕಲ್ಲದೆ ಇನ್ನೊಂದು ಜನ್ಮಕ್ಕಾದರೂ ನಾನು ಇವಳಿಗೆ ದಿಕ್ಕಾಗಿರಬೇಕು ಎಂದೇ ನನ್ನ ತಿಳುವಳಿಕೆ."[5] ಎನ್ನುವ ನಿಲುವು ವೆಂಕಟಿಗನದು. ವೆಂಕಟಿಗ ಇಲ್ಲಿ ಜವಾಬ್ದಾರಿಯುತ, ಆದರ್ಶ ವ್ಯಕ್ತಿಯಾಗಿಕಂಡು ಬರುತ್ತಾನೆ. ಹೀಗೆ ಇಲ್ಲಿ ಮಾಸ್ತಿ ಅವರು ಸಾಮಾನ್ಯನನ್ನು ಒಬ್ಬ ಅಸಾಮಾನ್ಯ ವ್ಯಕ್ತಿಯಾಗಿ ಚಿತ್ರಿಸಿದ್ದಾರೆ.

ವೆಂಕಟಿಗ ತಾಳಿದ ನಿಲುವಿನಲ್ಲಿ ರಂಗಿಯ ಮೇಲಿನ ಪ್ರೀತಿ ಇದ್ದರೂ, ಅವನಿಗೆ ದಾಂಪತ್ಯದಲ್ಲಿ ಲೈಂಗಿಕ ನಿಷ್ಠೆ ಇದೆ. ಏಕಪತ್ನಿ ವ್ರತ ಈತನದು. ಆದರೆ ಸಾವುಕಾರ ಹಾಗಲ್ಲ. ಸುಂದರವಾದ, ಸಿಕ್ಕ ಹೆಣ್ಣುಗಳನ್ನು ಹೊತ್ತು ತಂದು ತನಗೆ ಸಾಕು ಅನಿಸುವಷ್ಟು ಬಳಸಿಕೊಂಡು ದೂರ ತಳ್ಳುವ ವಿಕೃತ ಕಾಮಿಯಾತ. ಆ ಸಾವುಕಾರನಲ್ಲಿಗೆ ವೆಂಕಟ ಹೋದಾಗ 'ನಿನ್ನ ಹೆಂಡತಿಯ ತೆರವನ್ನು ಕೊಟ್ಟುಬಿಡುತ್ತೇನೆ' ಎಂದವನು ಹೇಳಿದಾಗ, ವೆಂಕಟ ರಂಗಿಯೇ ಈ ಮಾತು ಹೇಳಲಿ ಎನ್ನುತ್ತಾನೆ. ಸಂಸಾರ ಅಥವಾ ಬದುಕಿನ ಮುಖ್ಯ ಘಟ್ಟಗಳಲ್ಲಿ ನಿರ್ಧಾರಗಳು ಗಂಡ–ಹೆಂಡತಿಯರದೆ ಆಗಿರಬೇಕು. ಅನ್ಯರ ಪ್ರವೇಶಕ್ಕೆ ಅವಕಾಶ ಮಾಡಿಕೊಡಬಾರದು ಎನ್ನುವುದಕ್ಕೆ ಈ ಸಂದರ್ಭ ಸಾಕ್ಷಿಯಾಗಿದೆ.

"ಅವಳ ಸೀರೆ ಅವಳ ಕುಪ್ಪಸ ಅವಳ ಗೊಲಸು, ಅವಳ ಕಡಗ, ಅದನ್ನೇನು ಹೇಳುವುದು? ಬಡವರ ತೊಡವಿನಲ್ಲಿ ಎಷ್ಟೋ ಚೆನ್ನಾಗಿದ್ದ ಹುಡುಗಿ ಈ ಐಶ್ವರ್ಯದಲ್ಲಿ ನೋಡಬಾರದು ಎಂಬಂತೆ ವಿಕಾರವಾಗಿ ಕಂಡಳು."[6] ಆಭರಣಗಳು ಹೆಣ್ಣಿನ ಸೌಂರ್ಯವನ್ನು ಹೆಚ್ಚಿಸುತ್ತವೆ ಎನ್ನುವ ನಂಬಿಕೆ ಇದೆ. ಆದರೆ ವೆಂಕಟಿಗ ಅಂತಹ ಅಸಹಜ, ಕೃತಕ ಸೌಂರ್ಯವನ್ನು, ಆಡಂಬರವನ್ನು ಒಪ್ಪುವವನಲ್ಲ. ಕೃತಕ ಸೌಂದರ್ಯಕ್ಕಿಂತ, ಸಹಜ ಸೌಂದರ್ಯ, ಸರಳತೆ, ನ್ಯಾಯವಾದ ದುಡಿಮೆ ಮನುಷ್ಯನ ವ್ಯಕ್ತಿತ್ವವನ್ನು, ಅಲಂಕಾರವನ್ನು ಮತ್ತಷ್ಟು ಹೆಚ್ಚಿಸುತ್ತದೆ ಎಂಬುದು ಈ ಕತೆಯ ಪ್ರತಿಪಾದನೆಯಾಗಿದೆ.

ವೆಂಕಟಿಗನ ಪಾತ್ರವನ್ನು ಹಿರಿದಾಗಿಸುವ ಅನೇಕ ವಿಚಾರಗಳು ಈ ಕಥೆಯಲ್ಲಿ ಬರುತ್ತವೆ. ಹೆಂಡತಿಗೆ "ತಿರುಗಿ ನಿನಗೆ ಎಂದೇ ಆಗಲಿ ನನ್ನ ಬಳಿ ಬರಬೇಕು ಎನ್ನಿಸಿದರೆ ಸಂಕೋಚ ಪಡದೆ ಹೊರಟು ಬಂದುಬಿಡು. ನಾನು ಅದುವರೆಗು ಕಾದಿರುತ್ತೇನೆ,"[7] ಎನ್ನುತ್ತಾನೆ. ಈ ಮಾತು ಅವನ ಉದಾತ್ತಗುಣಕ್ಕೆ ನಿದರ್ಶನ. ವೆಂಕಟಿಗ ಎಲ್ಲವನ್ನು ಸಹಿಸಿಕೊಳ್ಳುವುದರಿಂದ ಅವನು ದುರ್ಬಲ ಪಾತ್ರವಲ್ಲ. ಬದಲಿಗೆ ನಿರೂಪಕನೆ ಹೇಳುವಂತೆ ಎಲೆಯೆಲ್ಲ ಉದುರಿ ಹೋದರೂ ಕೊಂಬೆ ಕೊಂಬೆಯ ಕೊನೆಗೆ ಹೂವನ್ನು ಧರಿಸಿ ನಿಲ್ಲುವ ದೇವಕಣಿಗಿಲೆಯಂತೆ ಆತ್ಮವಂತ ಸತ್ವ.

ಕತೆಯಲ್ಲಿ ಕುಟುಂಬ ವಿಘಟನೆ ಕುರಿತು ಹೇಳುವುದಷ್ಟೇ ಅಲ್ಲ. ರಂಗಿಯ ಆತ್ಮಶೋಧವು ಈ ಕತೆಯಲ್ಲಿದೆ. ಆಕೆ ಸಾವುಕಾರ ತನ್ನ ಬದುಕಿಗೊಂದು ಪಾಠ ಕಲಿಸಿದ್ದರಿಂದ ಅವನನ್ನು ತಂದೆಯೆಂದು ಭಾವಿಸುತ್ತಾಳೆ. ಸಾವುಕಾರನ ಹೆಂಡತಿಯರಿಗೆ ಕ್ಷಮೆ ಯಾಚಿಸುತ್ತಾಳೆ. ಇಲ್ಲಿ ರಂಗಿ ಚಂಚಲತೆಯಿಂದ ತಪ್ಪು ಮಾಡಿದವಳಲ್ಲ. ಮರಳಿ ವೆಂಕಟಿಗನ ಹತ್ತಿರ ಬಂದು "ನನ್ನ ದೇವರು ತಿರುಗಿ ಸಿಕ್ಕಿದೆ, ಬದುಕಿಸಿದರೆ ಬದುಕಿಸು, ಸಾಯಿಸಿದರೆ ಸಾಯಿಸು"[8] ಎನ್ನುತ್ತಾಳೆ. ಅನ್ಯ ಸಂಬಂಧಗಳು ಶಾಶ್ವತ ಅಲ್ಲ ಎಂಬ ಅರಿವಿನೊಂದಿಗೆ ಆಕೆ ಮರಳಿ ತನ್ನ ಗಂಡನಲ್ಲಿಗೆ ಬರುತ್ತಾಳೆ. ವೆಂಕಟಿಗ ಆಗಲು ನಿರ್ಲಿಪ್ತವಾಗೆ ಇರುತ್ತಾನೆ. 'ಅವಳೇನು ತಿಳಿದ ಹೆಂಗಸಲ್ಲ. ಪಾಪ,' ಎನ್ನುವ ಮನೋಭಾವ ವೆಂಕಟಿಗನದು. ಲೈಂಗಿಕ ನೈತಿಕತೆ ಕುರಿತಂತೆ ಗಂಡುಗಳು ನಿರ್ಲಿಪ್ತ, ತಟಸ್ಥ ಧೋರಣೆ ತಳೆಯುವುದು ಸಾಮಾನ್ಯವಾದ ವಿಚಾರವೇನೂ ಅಲ್ಲ.

ರಂಗಿಗೆ ತನ್ನ ಗಂಡನು ಸಾವುಕಾರನಿಗೆ ಹುಟ್ಟಿದ ಈ ಮಗುವನ್ನು ಒಪ್ಪಿಕೊಳ್ಳುತ್ತಾನೊ ಇಲ್ಲವೋ ಎನ್ನುವ ಅಂಜಿಕೆ ಇರುತ್ತದೆ. ಅದಕ್ಕೆಂದೆ ಮಗುವನ್ನು ವೆಂಕಟಿಗನ ಮುಂದೆ ಹಿಡಿದು, "ಇದರ ಮೂಗು ನೋಡು ನಿನ್ನ ಹಾಗೆಯೇ ಇದೆ."[9] ಎನ್ನುತ್ತಾಳೆ. ವೆಂಕಟಿಗ 'ಹೌದು' ಎಂದು ಉತ್ತರಿಸುತ್ತಾನೆ. ತಾಯಿಯಾದವಳಿಗೆ ತನ್ನ ಮಗುವಿಗೆ ಒಂದು ಅಸ್ತಿತ್ವ ಕೊಡುವುದು ನಮ್ಮಲ್ಲಿ ಅನಿವಾರ್ಯ. ಮಗುವನ್ನು ತಾಯಿಯೆ ಹೆತ್ತರೂ ಅದಕ್ಕೆ ತಂದೆಯ ಗುರುತನ್ನು ನಮ್ಮ ಸಮಾಜ ಕೇಳುತ್ತದೆ. ಮದುವೆಯಾದ ಹೆಣ್ಣಿಗೆ ಗಂಡನಿದ್ದರೆ ಒಂದು ಗೌರವ ಹೇಗೋ ಹಾಗೆಯೇ ಮಗುವನ್ನು ತಂದೆ ಗುರುತಿನ ಮೂಲಕ ಗುರುತಿಸಿಕೊಡುವುದು ಅಥವಾ ಅದಕ್ಕೆ ತಂದೆಯ ಹೆಸರು ಕಾಣಿಸುವುದು ಅನಿವಾರ್ಯ! ಇಲ್ಲದಿದ್ದರೆ ಅನೇಕ ಪ್ರಶ್ನೆಗಳಿಗೆ ಆಕೆ ಗುರಿಯಾಗಬೇಕಾಗುತ್ತದೆ! ನಮ್ಮ ಕೌಟುಂಬಿಕ ವ್ಯವಸ್ಥೆ ಇರುವುದೇ ಹೀಗೆ. ಇದನ್ನೆ ಇಲ್ಲಿ ಮಾಸ್ತಿಯವರು ಪ್ರತಿಪಾದಿಸುತ್ತಿದ್ದಾರೆ.

"ಮಗು ಯಾರದಾದರೇನು? ಬಾಲಗೋಪಾಲ. ಸಾಕಿದವರು ಪುಣ್ಯವಂತರು."[10] ಎನ್ನುವ ಭಾವನೆ ವೆಂಕಟಿಗನದು. ಮಗು ತನ್ನದಲ್ಲ ಎಂಬುದು ವೆಂಕಟಿಗನಿಗು ಗೊತ್ತು. ರಂಗಿಗು ಗೊತ್ತು. ತನ್ನನ್ನೆ ನಂಬಿ ಬಂದವಳಿಗೆ ಮೋಸ ಮಾಡಬಾರದು ಎನ್ನುವ ಆದರ್ಶ ವೆಂಕಟಿಗನದು. ಅವನದು ಅಗಾಧವಾದ ಜೀವನ ಪ್ರೀತಿ. ಸಹಿಸಿಕೊಳ್ಳುವ ಗುಣ. ಇಲ್ಲಿ ಬಡತನದಲ್ಲಿ ಕೃತ್ರಿಮತೆ ಇಲ್ಲ. ಇದೊಂದು ರೀತಿ ವಿಭಿನ್ನ ನೈತಿಕತೆ. ನಿಜವಾದ ಗಂಡು ನೈತಿಕತೆ ಇರಬೇಕಾದುದೆ ಹೀಗೆ ಎಂದರೂ ತಪ್ಪಲ್ಲ. ಗಂಡು ನೈತಿಕತೆ ಕೂಡ ನಮ್ಮಲ್ಲಿ ವರ್ಗಾತೀತ ಅಲ್ಲ. ಕೊನೆಯಲ್ಲಿ ನಿರೂಪಕನಿಗೆ ವೆಂಕಟಿಗನ ಹೆಂಡತಿ ಹಾಗೂ ಮಗುವಿಗೆ ಆಶೀರ್ವಾದ ಮಾಡುವಾಗ ಮಗು ಯಾರಂತೆ ಇದೆ

ನೋಡಬೇಕು ಎನ್ನುವ ಕುತೂಹಲ ಉಂಟಾಗುತ್ತದೆ. ಆದರು ತಂದೆಯೆ ಮಾಡದಿರುವ ಕೆಲಸವನ್ನು ನಾನೇಕೆ ಮಾಡಲಿ ಎಂದು ಸುಮ್ಮನಾಗುತ್ತಾನೆ. ಇಲ್ಲು ನೈತಿಕತೆಯ ಹೇರಿಕೆ, ಸಲ್ಲದ ಇಣುಕುವಿಕೆ ಇಲ್ಲ. ಉದಾತ್ತ ನೈತಿಕತೆ ಇದೆ. ಅಂದರೆ ನಿರೂಪಕ ಇಲ್ಲಿ ತನ್ನ ವರ್ಗದ ನೈತಿಕತೆ ಬಗ್ಗೆ ಮಾತಾಡುವುದಿಲ್ಲ. ವೆಂಕಟಿಗನ ವರ್ಗದ ನೈತಿಕತೆ ಮತ್ತು ಉದಾತ್ತತೆ ಬಗ್ಗೆ ಮಾತಾಡುತ್ತಿದ್ದಾನೆ.

ನಿರೂಪಕ ಇಲ್ಲಿ ಒಂದು ನಿಲುವಿಗೆ ಬರುವುದಿಲ್ಲ. ತೀರ್ಮಾನಗಳನ್ನು ಓದುಗರಿಗೆ ಬಿಡುತ್ತಾನೆ. ಇದು ಮಾಸ್ತಿ ಅವರ ಕಥನ ಮೀಮಾಂಸೆಯು ಹೌದು. ನಿರೂಪಕನನ್ನು ಕೂಡ ಆತ್ಮಶೋಧಕ್ಕೆ ಒಳಗು ಮಾಡುವ ಕಥನದಂತೆ ಈ ಕತೆ ಇದೆ.

ಈ ಕತೆ ರಚನೆಯಾಗಿ ಸುಮಾರು ಎಪ್ಪತ್ತು ಎಂಬತ್ತು ವರ್ಷಗಳೆ ಕಳೆದಿವೆ. ಆದರೂ ನಿರಂತರ ಒಂದಲ್ಲ ಒಂದು ಕಾರಣಕ್ಕಾಗಿ ಈ ಕತೆ ಚರ್ಚೆಯಾಗುತ್ತ ಬಂದಿದೆ. ಕೌಟುಂಬಿಕತೆ, ಲೈಂಗಿಕ ನಿಷ್ಠೆಗಳನ್ನು ಇದು ಕಥಿಸುವುದರಿಂದ ನಮ್ಮಲ್ಲಿ ಮತ್ತೆ ಮತ್ತೆ ಇದು ಓದಿಗೆ ಗುರಿಯಾಗುತ್ತ ಬಂದಿದೆ. ಸಮಾಜ ಕೆಲವು ವಿಚಾರಗಳಲ್ಲಿ ಬದಲಾಗುವುದಿಲ್ಲ. ಆದರೆ ಬದಲಾಗಬೇಕು ಎಂಬ ತಾತ್ವಿಕತೆ ಇಲ್ಲಿನದು. ವೆಂಕಟಿಗ, ರಂಗಿ, ಸಾವುಕಾರ ಇವರುಗಳ ಮೂಲಕ ಬದುಕಿನ, ಸಮಾಜದ ಅಂತಹ ಬದಲುಗೊಳ್ಳಬೇಕಾದ ಚಿತ್ರಣವನ್ನು ಈ ಕತೆ ನೀಡುತ್ತದೆ.

ವೆಂಕಟಿಗನಂಥ ಮನಸ್ಥಿತಿಯವರು ನಮಗೆ ವಾಸ್ತವದಲ್ಲಿ ಕಾಣಸಿಗುವುದೇ ಕಷ್ಟ. ಬದುಕಿನ ಪ್ರೀತಿ, ಕುಟುಂಬದ ಪ್ರೀತಿ, ತನ್ನ ಬದುಕನ್ನು ನಾಶ ಮಾಡಿಕೊಳ್ಳದೆ, ಯಾವುದೆ ತಕರಾರಿಲ್ಲದೆ ಕಟ್ಟಿಕೊಳ್ಳುವಿಕೆ ಇವೆಲ್ಲವುಗಳ ಪ್ರತೀಕ ವೆಂಕಟಿಗ. ತಪ್ಪು ಮಾಡಿದವರನ್ನು ಶಿಕ್ಷಿಸುವುದಲ್ಲ; ಕ್ಷಮಿಸಿ ಬದುಕಲು ಅವಕಾಶ ಮಾಡಿಕೊಡುವುದು ಮುಖ್ಯ. ಇದು ಈ ಕತೆಯಲ್ಲಿನ ಒಂದು ಮುಖ್ಯವಾದ ತಾತ್ವಿಕತೆ ಕೂಡ. ಅಲ್ಲದೆ ಹಳೆಯ ಬೋವನಹಳ್ಳಿ, ಅಲ್ಲಿನ ಪಾಳು ಮನೆ, ಎಲೆ ಉದುರಿದರು ಅರಳಿ ನಗುತ್ತಿರುವ ಕಣಿಗಲೆ ಹೂ ಈ ಕತೆಯ ಒಳಗಿನ ರೂಪಕಗಳು. ಕತೆಯ ತುದಿ ಮೊದಲಲ್ಲಿ ಬರುವ ಆಕಾಶದೆತ್ತರಕ್ಕೆ ಸ್ವಚ್ಛಂದವಾಗಿ ಹಾರುವ ಗರುಡಗಳು ಕೂಡ ಇಲ್ಲಿ ಸಂಕೇತಗಳೆ.

ಬದುಕಿಗೆ ಬೇಕಿರುವುದು ಐಶ್ವರ್ಯವಲ್ಲ; ನೈತಿಕತೆ, ಪ್ರೀತಿ, ಹೊಂದಾಣಿಕೆ, ನಿಷ್ಠೆ ಎಂಬ ತತ್ವಜ್ಞಾನವನ್ನೂ; ಸಂಸಾರದಲ್ಲಿ ಎಷ್ಟೆ ಲೈಂಗಿಕ ಚಾಂಚಲ್ಯ ಉಂಟಾದರೂ ಗಂಡಾಗಲಿ ಹೆಣ್ಣಾಗಲೀ ಲಿಂಗಾತೀತವಾಗಿ ಹೊಂದಾಣಿಕೆಯಿಂದ ಇದ್ದಲ್ಲಿ ಮಾತ್ರ ದಾಂಪತ್ಯ ಉಳಿಯುತ್ತದೆ; ಇಲ್ಲವಾದಲ್ಲಿ ದಾಂಪತ್ಯ ಒಡೆಯುತ್ತದೆ ಎಂಬ ಉದಾತ್ತ ಲೈಂಗಿಕ ತಾತತ್ವಜ್ಞಾನವನ್ನೂ ಈ ಕತೆ ಮಂಡಿಸುತ್ತದೆ.

**ಕೊನೆ ಟಿಪ್ಪಣಿ**

**ವೆಂಕಟಿಗನ ಹೆಂಡತಿ:** ಸಣ್ಣಕತೆಗಳು (ಸಂಪುಟ 2), – ಶ್ರೀನಿವಾಸ, 2011, ಜೀವನಕಾರ್ಯಾಲಯಟ್ರಸ್ಟ್, ಬೆಂಗಳೂರು.

1. ಅದೇ ಪುಟ: 33
2. ಅದೇ ಪುಟ: 34
3. ಅದೇ ಪುಟ: 33
4. ಅದೇ ಪುಟ: 34
5. ಅದೇಪುಟ: 34
6. ಅದೇ ಪುಟ: 35
7. ಪುಟಅದೇ
8. ಅದೇ ಪುಟ: 38
9. ಅದೇ ಪುಟ: 39
10. ಪುಟಅದೇ

**ಲೇಖನದಲ್ಲಿ ಬಳಸಿರುವ ಪರಿಭಾಷೆಗಳು:**

ಆಶಯ, ತಾತ್ವಿಕತೆ, ಶೈಲಿ, ಶೀಲ, ಸ್ತ್ರೀಸ್ವಾತಂತ್ರ್ಯ, ಸ್ತ್ರೀಆಯ್ಕೆ, ಸ್ತ್ರೀನೈತಿಕತೆ, ಗಂಡುನೈತಿಕತೆ, ಗಂಡುಗುರುತು, ಲಿಂಗಾತೀತ ನೈತಿಕತೆ, ವರ್ಗಾತೀತ ನೈತಿಕತೆ, ಉದಾತ್ತ ನೈತಿಕತೆ, ನಿರ್ಲಿಪ್ತಧೋರಣೆ, ತಟಸ್ಥಧೋರಣೆ, ತತ್ವಜ್ಞಾನ, ಉದಾತ್ತ ಲೈಂಗಿಕತಾತತ್ವಜ್ಞಾನ.